ಓ:ಎಸ್:ನಂ.288/2017

ಡಿ .ಡಬ್ಲ್ಯೂ- 2

**ದಿ: 23-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಕೆ ಎನ್ ವಿ ವಕೀಲರಿಂದ**

ವಾದಿ ಎಸ್.ಕೆ.ಮೊಹಮ್ಮದ್ ರವರನ್ನು ಮಮುಂಜಿ ಎಂದು ಸಹ ಕರೆಯುತ್ತಾರೆಂದರೆ ಸರಿ. ದಾವ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವ ಸಂಗತಿಗಳನ್ನು ಯಾರು ಹೇಳಿ ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ವಾದಿಯು ಎಸ್.ಕೆ. ಇಬ್ರಾಹಿಂ ಮತ್ತು ಜೈನಾಬಿರವರ ಮಗ ಎಂದರೆ ಸಾಕ್ಷಿಯು ಎಸ್.ಕೆ. ಇಬ್ರಾಹಿಂ ಅವರ ಮಗ ಅಲ್ಲ ಆದರೆ ಜೈನಾಬಿ ಅವರ ಮಗ ಎಂದು ನುಡಿಯುತ್ತಾರೆ. ಜೈನಾಬಿಯವರು ಎಸ್.ಕೆ. ಇಬ್ರಾಹಿಂರವರ ಹೆಂಡತಿ ಎಂದರೆ ಸಾಕ್ಷಿಯು 2ನೇ ಹೆಂಡತಿ ಎಂದು ಸಾಕ್ಷ್ಯ ನುಡಿಯುತ್ತಾರೆ. ಖಿನಾ ಆಬ್ದುಲ್ ನನಗೆ ಗೊತ್ತಿರುವುದಿಲ್ಲ. ಖಿನಾ ಅಬ್ದುಲ್ ರವರು ಯಾರು, ಅವರು ಈಗ ಎಲ್ಲಿ ಇದ್ದಾರೆ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ಖಿನಾ ಅಬ್ದುಲ್ ಯಾರ ಮಗ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವ ಆಸ್ತಿಯು ಎಸ್.ಕೆ ಇಬ್ರಾಹಿಂ ಮರಣದ ನಂತರ ಜೈನಾಬಿ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ಜೈನಾಬಿ ಮರಣದ ನಂತರ ದಾವ ಸ್ವತ್ತು ವಾದಿ ಹೆಸರಿಗೆ ಬಂದು ಅವರು ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿಯು ಅಕ್ರಮವಾಗಿ ದಾವ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಯು ಹುಟ್ಟಿದಾಗಿನಿಂದ ಆತನನ್ನು ಪೋಷಣೆ ಮಾಡಿದ್ದು ಎಸ್.ಕೆ.ಇಬ್ರಾಹಿಂ ಮತ್ತು ಜೈನಾಬಿಯವರು ಎಂದರೆ ಸರಿ. ವಾದಿಯು ಹುಟ್ಟಿದಾಗಿನಿಂದಲೂ ಮಾಳೀಕೊಪ್ಪ ಗ್ರಾಮದಲ್ಲಿ ವಾಸವಾಗಿದ್ದಾನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾಲ್ಕು ವರ್ಷದ ಮಗುವಾಗಿದ್ದಾಗಿನಿಂದ ಮಾಳಿಕೊಪ್ಪದಲ್ಲಿ ವಾಸವಾಗಿದ್ದಾನೆಂದು ನುಡಿಯುತ್ತಾರೆ.

1ನೇ ಪ್ರತಿವಾದಿ ನನ್ನ ಅಕ್ಕನ ಮಗಳು. ವಾದಿಯು ಎಸ್.ಕೆ. ಇಬ್ರಾಹಿಂನ ಮಗನಾಗಿದ್ದರೂ ಸಹ ನಾನು 1ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜೈನಾಬಿ ನನ್ನ ಅಕ್ಕ ಅಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ಹಾಜರುಪಡಿಸಬಲ್ಲೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಮೈಮುನ್ನೀಸರವರಿಗೆ ಸಹಾಯ

ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***